ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ ಈ ಮುನಿಸಿಪಲ್ ಸ್ಕೂರ್ ಬೋರ್ಡ್‌ಗೆ ಧಾರವಾಡ-ಹುಬ್ಬಳ್ಳಿ ಪ್ರೈಮರಿ ಎಜುಕೇಷನ್ ಆಕ್ಟ್ ಅನ್ವಯ ಆಗುತ್ತದೆಯೇ? ಅಥವ ಕಾರ್ಪೊರೇಷನ್ ಆಕ್ಟ್ ಅನ್ವಯ ಆಗುತ್ತದೋ ಅಥವಾ ಸ್ಕೂರ್ ಬೋರ್ಡ್ ಕಾಯಿದೆಯ ಪ್ರಕಾರ ಇದು ಅಸ್ತಿತ್ವದಲ್ಲಿ ಇದೆಯೋ!

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಪ್ರಶ್ನೆಗೂ ಅದಕ್ಕೂ ಸಂಬಂಧವಿಲ್ಲ. ಆದರೂ ಉತ್ತರ ಕೊಡುತ್ತೇನೆ. ಪ್ರೈಮರಿ ಎಜುಕೇಷನ್ ಆಕ್ಟ್ ಪ್ರಕಾರ ಮುನಿಸಿಪಲ್ ಸ್ಕೂರ್ ಬೋರ್ಡ್ ಅಸ್ತಿತ್ವದಲ್ಲಿದೆ. ಅದೇ ಆಧಾರದಮೇಲೆ ಮುಂದುವರಿಸಿಕೊಂಡು ಬರುತ್ತಾ ಇದೆ. ಆದರೆ ಇದನ್ನು ಏಕೀಕೃತ ಆಡಳಿತವಾಗಿ ತರಬೇಕು ಎಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಂ. ನಾಗಪ್ಪ.—ಕಾರ್ಪೊರೇಷನ್ ಅಧ್ಯಕ್ಷರನ್ನು ನಾಮಿನೇಷನ್ ಮಾಡಬೇಕಾದ್ದು ಔಚಿತ್ಯ. ಅವರು ಈ ಸ್ಕೂರ್ ಬೋರ್ಡ್‌ಗೆ ಚುನಾವಣೆ ಮಾಡಬೇಕಾದರೆ ಅದು ಪ್ರೈಮರಿ ಆಕ್ಟ್ ಪ್ರಕಾರ ಆಗದೆ, ಕಾರ್ಪೊರೇಷನ್ ಆಕ್ಟ್ ಪ್ರಕಾರ ಆದರೆ ಈ ಕಾಯಿದೆ ದೃಷ್ಟಿಯಿಂದ ಆ ರೀತಿ ಮಾಡುವುದಕ್ಕೆ ಕಿಮ್ಮತ್ತು ಇದೆಯೇ! ಮತ್ತು 6 ನೇ ತಾರೀಖು ಡೈರೆಕ್ಟರ್‌ರವರಿಂದ ಸರ್ಕಾರಕ್ಕೆ ಹೋದರೆ, ಸರ್ಕಾರದಲ್ಲಿ 22 ನೇ ತಾರೀಖಿನವರೆಗೆ ಇರಲಿಕ್ಕೆ ಕಾರಣ ಏನು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಡೈರೆಕ್ಟರ್‌ರವರಿಂದ 7ನೇ ತಾರೀಕು ಬಂದಿದೆ. 22ನೇ ತಾರೀಖು ನೋಟಿಫಿಕೇಷನ್ ಹೊರಡಿಸಿದೆ. ನಮ್ಮಲ್ಲಿ 15 ದಿವಸ ತಡವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮೇಯರ್ ಅವರು ಬರೆದ ಕಾಗದ ಮುನಿಸಿಪಲ್ ಅಡ್‌ಮಿನಿಸ್ಟ್ರೇಷನ್ನಿಗೆ ಹೋಯಿತು, ನಮಗೆ ಬರಲಿಲ್ಲ. ಅವರು ನೋಡಿಕೊಂಡು ಮತ್ತೆ ಕಾರ್ಪೊರೇಷನ್‌ಗೆ ಬರೆದರು, ಆಮೇಲೆ ಅಲ್ಲಿಂದ ನಮಗೆ ಬಂತು ಎಂದು ಹೇಳಿದರು. ಆಮೇಲೆ ಅದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳರಾಯಿತು ಎಂದೂ ಹೇಳಿದರು. ಮುನಿಸಿಪಲ್ ಅಡ್‌ಮಿನಿಸ್ಟ್ರೇಷನ್ನಿಗೆ ಬಂದಾಗ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಹೋಗಬೇಕು ಎಂದು ಅವರಿಗೆ ತಿಳಿಯಲಿಲ್ಲವೇ, ಅದರ ಪರಿವೆ ಅವರಿಗೆ ಇಲ್ಲವೇ? ಅವರ ಜೂರಿಸ್‌ಡಿಕ್ಷನ್ ಏನು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮುನಿಸಿಪಲ್ ಕಮಿಷನ್‌ನರಿಗೆ ಮುನಿಸಿಪಲ್ ಡಿಪಾರ್ಟ್‌ಮೆಂಟಿನವರು ಕೇಸನ್ನು ವಾಪಸ್ ಕಳಿಸಿದರು. ಆ ಕೇಸ್ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಬರಬೇಕಾದ್ದು ಎಂದು ನಾವು ಡಿ. ಪಿ. ಐ. ಅವರಿಗೆ ಒಂದು ರಿಮೈಂಡರ್ ಕಳಿಸಿದೆವು. ಅಲ್ಲಿಂದ ಪ್ರಪೋಸರ್ ಬಂತು. ಆ ಪ್ರಕಾರ ಮಾಡಿದ್ದೇವೆ.

Cocoon Markets in Ramanagaram Sub-Division

580. **Sri C. R. RANGE GOWDA** (Magadi).—

Will the Minister for Agriculture be pleased to state:—

(*a*) number of Government and private cocoon markets in each taluk of Ramanagaram Sub-Division (Talukwise figures may be furnished);

(*b*) the reason for having such different types of cocoon markets;

(*c*) the transactions carried on in each one of these markets each year for the last three years;

(*d*) whether it has come to the notice of Government that on account of establishing different types of cocoon markets, sericulturists are put to hardship;

(*e*) the action taken to safeguard the interest of the Sericulturists of the abovesaid area?

Sri B. RACHAIAH (Minister for Agriculture).—

(a)		*Govt. Cocoon Markets*	*Private Cocoon Markets*
1. Ramanagaram Taluk	...	2	4
2. Channapatna Taluk	...	1	1
3. Kanakapura Taluk	...	2	9
4. Magadi Taluk	...	2	...

(*b*) According to the Mysore Silk Worm Seed and Cocoon (Regulation of Production, Supply and Distribution) Act, 1959 which is in force, Government Cocoon Markets only have to function. Suitable action is being taken to see that the Private markets are eliminated.

(*c*)—

Name of Government Notified Cocoon Markets		1966-67 quantity ofCocoons transacted in Kgs.	1967-68 quantity of Cocoons transacted in Kgs.	1968-69 (up to end of January 69) quantity of Cocoons transacted in Kgs.
1. Ramanagaram	...	9,644.4	22,645.0	92,741.8
2. Channapatna	...	1,28,739.3	1,99,356.7	1,73,607.2
3. Kanakapura	...	16,373.2	26,239.87	3,492.3
4. Chickmudawadi	...	46,812.4	13,758.4	635.4
5. Magadi	...	87,853.0	95,963.3	1,02,301.0
6. Veeregowdanadoddi	...	9,063.7	11,296.3	2,484.0
7. Bidadi	...	12,502.3	18,149.5	10,200.3

Private Cocoon Markets—figures not available.

(*d*) Yes.

(*e*) Suitable amendments to Act and Rules for eliminating private sectors are under consideration. When these are passed there will be no hardship to the sericulturists in marketing cocoons.

ಶ್ರೀ ಸಿ. ಆರ್. ರಂಗೇಗೌಡ.—ಸರ್ಕಾರಿ ಕಕೂನ್ ಮಾರುಕಟ್ಟೆಗಳು 7, ಖಾಸಗಿಯವರದು 14 ಮೈಸೂರು ಸಿಲ್ಕ್ ವರ್ಮ್ ಸೀಡ್ ಅಂಡ್ ಕಕೂನ್ (ರೆಗ್ಯುಲೇಷನ್ ಆಫ್ ಪ್ರೊಡಕ್ಷನ್, ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್) ಆಕ್ಟ್, 1959 ರ ಪ್ರಕಾರ ಮಾಡಿದ್ದಾರೆ. ಖಾನಗಿ ಕಕೂನ್ ಮಾರ್ಕೆಟ್ಸ್‌ನವರ ಪ್ರಭಾವಕ್ಕೆ ಬಲಿಯಾಗಿ ಈ ಕಾನೂನು ಜಾರಿಗೆ ತರದೆ ರೇಷ್ಮೆ ಬೆಳೆಯುವ ರೈತರಿಗೆ ಅನ್ಯಾಯ ಮಾಡಿದ್ದಾರೆ ಕರ್ತವ್ಯರೋಪ ಮಾಡಿದ್ದಾರೆ ಎಂದು ಭಾವಿಸಬಹುದೇ !

ಶ್ರೀ ಬಿ. ರಾಚಯ್ಯ.—ಇಲ್ಲ, ಸ್ವಾಮಿ. ಕಾನೂನನ್ನು ಜಾರಿಗೆ ಕೊಟ್ಟಾಗ ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ಕೆಲವು ಫಿರ್ಯಾದುಗಳಾದುವು. ಅವು ತೀರ್ಮಾನವಾಗುವ ವರೆಗೂ ಬೇರೆ ಕಡೆ ಹೊಸದಾಗಿ ಕಕೂನ್ ಮಾರುಕಟ್ಟೆಗಳನ್ನು ತೆಗೆಯುವುದಕ್ಕಾಗಲಿಲ್ಲ. ಅವಾದ ಮೇಲೆ ಎಲ್ಲಕಡೆಯೂ ಸರ್ಕಾರಿ ಕಕೂನ್ ಮಾರುಕಟ್ಟೆಗಳನ್ನು ತೆರೆದಿದ್ದೇವೆ. ಆದರೂ ಕಕೂನ್ ಮಾರ್ಕೆಟ್ ನಡೆಸುತ್ತಿರುವ ಖಾಸಗಿಯವರು ಕಾನೂನು ಪರಿಮಿತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಹೇಗೆ ಸಾಧ್ಯ ಎಂದು ಪ್ರಯತ್ನ ಮಾಡುತ್ತಿದ್ದಾರೆ. ಬೆಳೆಗಾರರ ಹಿತವನ್ನು ಕಾಪಾಡುವುದಕ್ಕೆ ನರ್ವ ಪ್ರಯತ್ನವನ್ನೂ ಮಾಡಲಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—(ಇ) ಭಾಗಕ್ಕೆ ಕೊಟ್ಟಿರುವ ಉತ್ತರದ ಸಂಬಂಧದಲ್ಲಿ ಕೇಳುತ್ತೇನೆ. ಇರಾಖೆಯವರು ರಾಮನಗರ ಸರ್ಕಾರಿ ಕಕೂನ್ ಮಾರುಕಟ್ಟೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕಳಿಸಿದಾಗ ಅವರಿಗೆ ಮುಖಭಂಗ ಮಾಡಿ ಅವಮಾನ ಮಾಡಿದ್ದಾರೆ. ಈಗಲಾದರೂ ಕೂಡ ಜಾಗ್ರತೆಯಾಗಿ ಆ ಅವಮಾನಕ್ಕೆ ಪ್ರತೀಕಾರವೆಂಬಂತೆ ಇದನ್ನು ಕಾರ್ಯರೂಪಕ್ಕೆ ತರುತ್ತೀರಾ ?

ಶ್ರೀ ಬಿ. ರಾಚಯ್ಯ.—ಇಂಥ ಕೋಷಿಯರ್ ಅಜಿಟೇಷನ್ ಬಂದಾಗಲೆಲ್ಲ ಪಟ್ಟಭದ್ರ ಹಿತಗಳು ಸಾಕಷ್ಟುಮಟ್ಟಿಗೆ ತಮ್ಮ ಹಿತವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಅದು ಆಗದೆ ಇದ್ದಾಗ ಅಧಿಕಾರಿಗಳ ಮೇಲೆ ಕೈ ಮಾಡುತ್ತಾರೆ. ಈ ವಿಚಾರವಲ್ಲಿ ಕೇನು ಕೂಡ ಹಾಕಿದ್ದೇವೆ. ತಿದ್ದುಪಡಿ ತರುವುದಕ್ಕೆ ಡ್ರಾಫ್ಟ್ ಮಾಡಿಸುತ್ತಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದರೂ ಕೂಡ ಖಾನಗಿ ರೇಷ್ಮೆ ಗೂಡಿನ ಮಾರುಕಟ್ಟೆಯವರು ಪ್ರಭಾವ ಬೀರಿ ರಾಮನಗರ, ಚನ್ನಪಟ್ಟಣ ಮುಂತಾದ ಕಡೆ ಕಾನೂನಿನ ಚೌಕಟ್ಟಿನೊಳಗೆ ಬಾರದೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಆಗಲೇ ಗಮನಕ್ಕೆ ಬಂದಿದೆಯೆಂದು ಹೇಳಿದೆ. ರೈತರಿಗೆ ಅಡ್ವಾನ್ಸಾಗಿ ಮುಂಚೆಯೇ ಸಾಲ ಕೊಟ್ಟು ಗೂಡಿಗೆ ಅವರ ಕಡೆ ಬರುವಹಾಗೆ ಪ್ರಯತ್ನಮಾಡುತ್ತಿದ್ದಾರೆ. ರೈತರು ಮನಸ್ಸುಮಾಡಿದರೆ ಈಗಲೂ ಕೂಡ ಇರುವ ಕಾಯಿದೆ ಪ್ರಕಾರ ಸರಕಾರದ ಮಾರುಕಟ್ಟೆಗಳಲ್ಲೇ ಮಾರುವುದಕ್ಕೆ ಅನುಕೂಲವಿದೆ. ಈಗ ಸರಕಾರಿ ಮಾರುಕಟ್ಟೆಯನ್ನು ಬೆಳಿಗ್ಗೆ 8 ರಿಂದ ಸಾಯಂಕಾಲ 6 ಗಂಟೆಯವರೆಗೆ ತೆರೆದಿರಬೇಕು. ಆಗ ಗೂಡು ಮಾರಾಟಮಾಡುತ್ತಾರೆ. ಕಾನೂನಿಗೆ ವಿರೋಧವಾಗಿ ಮಾರಾಟ ಮಾಡಿದಾಗ ಕಾಗ್‌ನೈಜಬಲ್ ಆಫೆನ್ಸ್ ಎಂದು ಪರಿಗಣಿಸಿ ಗೂಡನ್ನು ಸೀಜ್ ಮಾಡುವುದಕ್ಕೆ ಕಾನೂನಿಗೆ ತಕ್ಕ ತಿದ್ದುಪಡಿಯನ್ನು ತರುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರುವ ಕಾನೂನು ಪರಿಮಿತಿಯಲ್ಲೇ ರೈತರು ವ್ಯಾಪಾರ ಮಾಡುವವರು, ಕೊಳ್ಳುವವರು ಸರಕಾರಿ ಮಾರುಕಟ್ಟೆಗೆ ಬರುವ ಹಾಗೆ ಮಾಡಲು ಸಾಧ್ಯವಿಲ್ಲವೆ ? ಇತ್ತೀಚೆಗೆ ರೈತರು ಸರಕಾರಿ ಮಾರುಕಟ್ಟೆಯಲ್ಲು ನಡೆಯುವ ವಿಧಾನವನ್ನು ನೋಡಿ ಅದರಿಂದ ತೊಂದರೆಯೆಂದು ಬೇರೆ ಕಡೆಗೆ ಹೋಗುತ್ತಿರಬಹುದಲ್ಲವೆ?

ಶ್ರೀ ಬಿ. ರಾಚಯ್ಯ.—ಮೊದಲು ಸರಕಾರಿ ಮಾರುಕಟ್ಟೆ ಬರುವುದಕ್ಕೆ ಮುಂಚೆ ಖಾನಗಿಯವರ ಮಾರುಕಟ್ಟೆಗಳಲ್ಲಿ ತೊಂದರೆ ಇತ್ತು. ಆಮೇಲೆ ಸರಕಾರಿ ಮಾರುಕಟ್ಟೆಗಳಲ್ಲಿ ನೂರಕ್ಕೆ ಒಂದೂವರೆ ಇದ್ದಾಗ ಹೆಚ್ಚು ರೈತರು ಅಲ್ಲಿಗೆ ಬರುತ್ತಿರಲಿಲ್ಲ. ಆದುದರಿಂದ ಅದನ್ನು ಸೇಕಡ ಒಂದಕ್ಕೆ ಇಳಿಸಬೇಕೆಂದು ತೀರ್ಮಾನವಾಗಿದೆ. ದಳ್ಳಾಳಿಗಳ ಮೂಲಕ ಬರುವ ಕಕೂನ್‌ಗಳಿಗೆ ಹೆಚ್ಚು ಬೆಲೆ ಕೊಡುತ್ತಿದ್ದಾರೆ, ರೈತರಿಗೆ ತೊಂದರೆಯಾಗಿದೆ, ಸರಿಯಾದ ಬೆಲೆಗೆ ದೊರೆಯುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆ.

ಶ್ರೀ ಕೆ. ಎಚ್. ರಂಗನಾಥ್.—ತಮ್ಮಲ್ಲಿ ಜಾಸ್ತಿ ಸಿಬ್ಬಂದಿಯಿದ್ದರೂ ಕೂಡ ಕಾನೂನನ್ನು ಸರಿಯಾಗಿ ಜಾರಿಗೆ ಕೊಡುವಂತೆ ತೀರ್ಮಾನಮಾಡಲು ಸಾಧ್ಯವಿಲ್ಲವೇ!

ಶ್ರೀ ಬಿ. ರಾಚಯ್ಯ.—ಈಗಿರುವ ಕಾನೂನು ಪ್ರಕಾರ ಅನೇಕ ಕೇಸುಗಳನ್ನು ಹಾಕಿದೆ. ಕಾಂಪೌಂಡ್ ಕೂಡ ಮಾಡಿದೆ ಆದರೂ ಕೂಡ ಅನುಕೂಲವಾಗಿಲ್ಲ. ತೀಮಾನಾಗಿ ತಕ್ಕ ಕಾಯಿದೆ ತರಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಈಗತಾನೆ ಕಾಗ್‌ನೈಜಬರ್ ಆಫೆನ್ಸ್ ಎಂದು ಮಾಡಲು ರೂರ್ಸ್ ಮಾಡರಾಗಿದೆ, ಅದನ್ನು ತರುತ್ತೇವೆ ಎಂದು ಹೇಳಿದರು. ಅದನ್ನು ತೀವ್ರವಾಗಿ ಜಾರಿಗೆ ತರಲಾಗುವುದೇ?

ಶ್ರೀ ಬಿ. ರಾಚಯ್ಯ.—ತರುವುದಕ್ಕೆ ಪ್ರಯತ್ನಮಾಡುತ್ತೇವೆ.